ಆ) ಕರ್ನಾಟಕದಲ್ಲಿ ಬೆಳೆಯುವ ಹತ್ತಿಯು ಪ್ರಮಾಣವು (ಡಿ.ಪಿ.ಹೆಚ್-೩೨) ಗವನ್ಮಾರ್ಹವಾಗಿ ಹೆಚ್ಚಿದ್ದರೂ ಗುಣಮಟ್ಟವು ನಿಗಧಿಪಡಿಸಿದ ತಪಶೀಲನ (ಸ್ಪೆಷಿಫಿಕೇಷನ್) ಪ್ರಕಾರ ಇಲ್ಲದೆ ಇರುವುದರಿಂದ ಮತ್ತು ಕೇಂದ್ರ ಸರ್ಕಾರವು ನಿಗಧಿಪಡಿಸಿರುವ ಬೆಲೆಗಿಂತ ಮುಕ್ತ ಮಾರುಕಟ್ಟೆಯು ಬೆಲೆಯಂ ಸಧ್ಯ ಹೆಚ್ಚಾಗಿರುವ ಕಾರಣ, ಹೆಚ್ಚು ಖರೀದಿಸಲು ಸಾಧ್ಯವಾಗಿರುವುದಿಲ್ಲ.

ಕರ್ನಾಟಕ ಮಾರಾಟ ಮಹಾ ಮಂಡಳವು ಸ್ವಂತ ವ್ಯವಹಾರದಲ್ಲಿ ಖರೀದಿ ಮಾಡುವುದಿಲ್ಲ. ಈ ಸಂಸ್ಥೆಯು, ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗ ಕೈಗಾರಿಕಾ ನಿಗಮ, ಸಹಕಾರಿ ರಾಷ್ಟ್ರೀಯ ವ್ಯವಸಾಯ ಸಹಕಾರ ಮಾರಾಟ ಮಹಾ ಮಂಡಳಿ-ಇವುಗಳ ಪರವಾಗಿ ಹತ್ತಿಯನ್ನು ಖರೀದಿಸುತ್ತಿದೆ. ಈ ಸಂಸ್ಥೆಗಳ ಬೇಡಿಕೆಗಳ ಮೇಲೆ, ಮಹಾ ಮಂಡಳದ ಖರೀದಿ ಅವಲಂಬಿಸಿರುತ್ತದೆ. ಹತ್ತಿಯ ಮಾರುಕಟ್ಟೆ ಬೆಲೆ, ಬೆಂಬಲ ಬೆಲೆಗಿಂತ ಜಾಸ್ತಿ ಇರುವುದರಿಂದ ಮತ್ತು ಮಾರುಕಟ್ಟೆಯಲ್ಲಿ ಹತ್ತಿಯ ಬೆಲೆಯು ಏರಿಳಿತದ ಪ್ರವೃತ್ತಿ ಇರುವುದರಿಂದ, ಸ್ವಂತ ಖರೀದಿ ಮಾಡುತ್ತಿಲ್ಲ.

೧) ೧) ಗಿರಣಿಗಳು ತಮ್ಮ ನೂಲು ತೆಗೆಯುವ ಕಾರ್ಯಕ್ರಮಕ್ಕೆ ಅವಶ್ಯಕವಾದ ಮಿಶ್ರಣಕ್ಕೆ ಬೇಕಾಗುವ ಎಸ-೬, ಎಸ್-೪, ಕೆ-೩೪, ವೈ-೧ ಮತ್ತು ಸೂಪರ್-೨೨ ಈ ತೆರಹದ ಹತ್ತಿಯು ಸ್ಥಳೀಯವಾಗಿ ದೊರಕದ ಪ್ರಯುಕ್ತ ಗುಜರಾತ್ ಮತ್ತು ಪಂಜಾಬ್ ರಾಜ್ಯಗಳಿಂದ ಖರೀದಿಸಬೇಕಾಗಿದೆ.

೨) ಗಿರಣಿಗಳು ನೂಲಿನ ಗುಣಮಟ್ಟವನ್ನು ಕಾಯ್ದುಕೊಂಡು ಮಿಶ್ರಣ ವೆಚ್ಚವನ್ನು ಕಡಿಮೆ ಮಾಡಲು ಅವಶ್ಯವಿರುವ ಹತ್ತಿ (ಆರಳಿ) ರಾಜ್ಯದಲ್ಲಿ ಲಭ್ಯವಿರುವುದಿಲ್ಲ.

ರೈತರಿಗೆ ನೀಡಿರುವ ಐ.ಆರ್.ಡಿ.ಪಿ. ಸಾಲದ ಬಗ್ಗೆ

೩೦೬. ಶ್ರೀ ಬಾಬಾಗೌಡ ಪಾಟೀಲ (ಕಿತ್ತೂರು).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರೈತರಿಗೆ ನೀಡಿರುವ ಬೆಳೆ ಸಾಲದ ಒಟ್ಟು ಮೊಬಲಗೆಷ್ಟು ?

ಆ) ಬಡವರಿಗೆ ನೀಡಿರುವ ಐ.ಆರ್.ಡಿ.ಪಿ. ಸಾಲದ ಮೊಬಲಗೆಷ್ಟು ?

(ಸಹಕಾರಿ ಸಂಘಗಳ ಮತ್ತು ಬ್ಯಾಂಕುಗಳ ಅಂಕಿ ಸಂಖ್ಯೆಗಳನ್ನು ಪ್ರತ್ಯೇಕವಾಗಿ ಒದಗಿಸುವುದು):

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು).—

ಅ) ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ರೈತರಿಗೆ ನೀಡಿದ ಬೆಳೆ ಸಾಲದ ವೈಕಿ ಬಾಕಿ ನಿಂತ ಸಾಲದ ವಿವರ ಈ ಕೆಳಗಿನಂತೆ.

(ರೂ. ಲಕ್ಷಗಳಲ್ಲಿ)

ಬಾಕಿ ನಿಂತ ಬೆಳೆ ಸಾಲ ದಿನಾಂಕ ೩೦-೬-೧೯೮೯ಕ್ಕೆ	೨೪,೯೭೧-೫೬

ಆ) ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಮತ್ತು ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು ೧೯೮೮-೮೯ರಲ್ಲಿ ವಿತರಿಸಿದ ಐ.ಆರ್.ಡಿ.ಪಿ. ಸಾಲಗಳ ವಿವರ ಈ ಕೆಳಗಿನಂತಿದೆ.

(ರೂ. ಲಕ್ಷಗಳಲ್ಲಿ)

	ಸದಸ್ಯರ ಸಂಖ್ಯೆ	ಮೊತ್ತ
೧ ಜಿಲ್ಲಾ ಬ್ಯಾಂಕುಗಳು	೫೯೩೨	೨೨೩.೨೦
೨ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಯ ಬ್ಯಾಂಕುಗಳು	೧೧೬೧	೭೫.೮೯